<u>ನೋಂದಾಯಿತ ಅಂಚೆ ಮತ್ತು ಸ್ವೀಕೃತಿ ಬಾಕಿ</u>

**<u>ಕರ್ನಾಟಕ ಸರ್ಕಾರ</u>**

**ಶ್ರೀ ಎ.ಕೃಷ್ಣಪ್ಪ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ**
**ವಿಚಾರಣಾಧಿಕಾರಿಗಳು ಇವರ ಸಮಕ್ಷಮ**

**<u>ಪ್ರಕರಣ ಸಂ: ಡಿಟಿಇ 01 ಡಿಇಕ್ಯೂ (2) 2011 , ದಿನಾಂಕ: 20/02/2015</u>**

ಸಂ: ಡಿಟಿಇ 01 ಡಿಇಕ್ಯೂ (2) 2011/5108

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001,
ದಿನಾಂಕ: 26/03/2015.

**<u>ವಿಚಾರಣೆಗೆ ಹಾಜರಾಗುವ ನೋಟಿಸ್</u>**

ಶ್ರೀ.ಜಿ.ಕಿಶನ್, ದ್ವಿ.ದ.ಸ, ಸರ್ಕಾರಿ ಎಸ್.ಕೆ.ಎಸ್.ಜೆ.ಟಿ.ಸಂಸ್ಥೆ, ಬೆಂಗಳೂರು ಆದ ನಿಮ್ಮ ವಿರುದ್ಧದ ಇಲಾಖಾ ವಿಚಾರಣೆಯನ್ನು ಮೇಲ್ಕಂಡ ಆದೇಶದಲ್ಲಿ ವಿಚಾರಣೆ ನಡೆಸಲು ಆದೇಶಿಸಿರುವ ಹಿನ್ನೆಲೆಯಲ್ಲಿ ಪ್ರಕರಣದ ವಿಚಾರಣೆಯನ್ನು ದಿನಾಂಕ: 18/03/2015 ರಂದು ಅಪರಾಹ್ನ 2.30 ಗಂಟೆಗೆ ಕೊಠಡಿ ಸಂ: 312, 3ನೇ ಮಹಡಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇಲ್ಲಿ ನಡೆಸಲು ತೀರ್ಮಾನಿಸಲಾಗಿತ್ತು. ಸದರಿ ದಿನಾಂಕದಂದು ವಿಚಾರಣೆಗೆ ನೀವು ಗೈರುಹಾಜರಾಗಿರುತ್ತೀರಿ. ಮತ್ತೊಂದು ಅವಕಾಶವನ್ನು ನೀಡುತ್ತಾ ದಿನಾಂಕ: 26/03/2015 ರಂದು 12.00 ಗಂಟೆಗೆ ಮೇಲ್ಕಂಡ ವಿಳಾಸದಲ್ಲಿ ನಡೆಸಲು ತೀರ್ಮಾನಿಸಿ, ಸದರಿ ದಿನಾಂಕದ ವಿಚಾರಣೆಗೆ ಹಾಜರಾಗುವ ನೋಟೀಸನ್ನು ನೀವು ಕಛೇರಿಗೆ ಸಲ್ಲಿಸಿರುವ ಸ್ವವಿಳಾಸಕ್ಕೆ ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ ಮುಖಾಂತರ ಕಳುಹಿಸಲಾಗಿತ್ತು. ಅಲ್ಲದೆ, ಸದರಿ ನೋಟೀಸನ್ನು ನೀವು ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಯ ಪ್ರಿನ್ಸಿಪಾಲರು ಸಹ ನಿಮ್ಮ ಸ್ವವಿಳಾಸಕ್ಕೆ ಕಳುಹಿಸಲಾಗಿದ್ದು, ಸದರಿ ಲಕೋಟೆಯು ಅಂಚೆಯಿಂದ **Addressee left return to sender** ಎಂಬ ಷರಾದೊಂದಿಗೆ ವಾಪಸ್ ಬಂದಿರುತ್ತದೆ. ಆದ್ದರಿಂದ ನೀವು **ದಿನಾಂಕ: 18/04/2015 ಬೆಳಿಗ್ಗೆ 12.00 ಗಂಟೆಗೆ** ವಿಚಾರಣೆಗೆ ತಪ್ಪದೇ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ವಿಚಾರಣೆಯನ್ನು ನಡೆಸಿ ಏಕಪಕ್ಷೀಯವಾಗಿ ಶಿಸ್ತುಪ್ರಾಧಿಕಾರಕ್ಕೆ ವರದಿ ಸಲ್ಲಿಸಲಾಗುವುದು.

(ಎ. ಕೃಷ್ಣಪ್ಪ) 2-4-13
*ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ*
*ವಿಚಾರಣಾಧಿಕಾರಿಗಳು*

*ಇವರಿಗೆ,*

1) ಶ್ರೀ.ಜಿ.ಕಿಶನ್ ಬಿನ್ ಶ್ರೀಮತಿ.ಆರ್.ಸುಜಾತ, #180, ಮೊದಲನೇ ಮಹಡಿ, 8ನೇ ಮುಖ್ಯರಸ್ತೆ, 3ನೇ ಕ್ರಾಸ್ ಪ್ರಮೋದ್ ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು-560 039.
2) ಶ್ರೀ.ಜಿ.ಕಿಶನ್ ಬಿನ್ ಶ್ರೀಮತಿ.ಆರ್.ಸುಜಾತ, #451, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಚಂದ್ರಶೇಖರ ಬ್ಲಾಕ್, ಬಿಇಎಂಎಲ್ ಲೇಔಟ್, 3ನೇ ಹಂತ, ರಾಜರಾಜೇಶ್ವರಿ ನಗರ, ಬೆಂಗಳೂರು-560 098.
3) ಶ್ರೀ.ಜಿ.ಕಿಶನ್, ದ್ವಿ.ದ.ಸ, ಸರ್ಕಾರಿ ಎಸ್.ಕೆ.ಎಸ್.ಜೆ.ಟಿ.ಸಂಸ್ಥೆ, ಬೆಂಗಳೂರು – ಪ್ರಿನ್ಸಿಪಾಲರ ಮುಖಾಂತರ

**<u>ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:</u>**

1. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಕೆ.ಎಸ್.ಜೆ.ಟಿ.ಸಂಸ್ಥೆ, ಬೆಂಗಳೂರು ಇವರು ಸದರಿಯವರಿಗೆ ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ ಮುಖಾಂತರ ನೋಟೀಸ್‌ನ್ನು ಜಾರಿ ಮಾಡಿ ವರದಿಯನ್ನು ಈ ಕಛೇರಿಗೆ ಕಳುಹಿಸುವ ಸಲುವಾಗಿ.
2. ಶ್ರೀ.ಬಿ.ಕೆ.ರಾಠೋಡ, ಸಾರ್ವಜನಿಕ ಸಂಪರ್ಕಾಧಿಕಾರಿಗಳು ಹಾಗೂ ಮಂಡನಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ವಿಚಾರಣೆ ದಿನಾಂಕದಂದು ಸರಿಯಾದ ಸಮಯಕ್ಕೆ ಹಾಜರಾಗತಕ್ಕದ್ದು.
3. ನೋಡಲ್ ಅಧಿಕಾರಿ, ಇ-ಆಡಳಿತ, ತಾಂ.ಶಿ.ಇ., ಬೆಂ, ಈ ನೋಟೀಸನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.